# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 122 |
| 2 | ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15.07.2024 |
| 4 | ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸುತ್ತಮುತ್ತ ಹಳ್ಳಿಗಳಲ್ಲಿ ಕರಡಿ ಮತ್ತು ಚಿರತೆಗಳು ಜನರಿಗೆ ಪ್ರಾಣಹಾನಿ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಜನರ ರಕ್ಷಣೆ ಹಾಗೂ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು); | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕನಕಗಿರಿ ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಾಡುಪ್ರಾಣಿಗಳು ಕಂಡುಬಂದಲ್ಲಿ ಜನರ ರಕ್ಷಣೆಗಾಗಿ ಸಿಬ್ಬಂದಿಯವರು ರಾತ್ರಿ ಗಸ್ತು ಮಾಡಿ ಪಟಾಕಿಗಳನ್ನು ಸಿಡಿಸಿ ಸದ್ದುಮಾಡಿ ವನ್ಯಪ್ರಾಣಿಗಳನ್ನು ಕಾಡಿಗೆ ಮರಳಿಸುವ ಕಾರ್ಯ ನಿರ್ವಹಿಸುತ್ತಿದ್ದಾರೆ. ಪದೇ ಪದೇ ವನ್ಯಪ್ರಾಣಿಗಳ ಸಂಚಾರ ಕಂಡುಬಂದಲ್ಲಿ, ಇಲಾಖೆ ವತಿಯಿಂದ ಬೋನನ್ನು ಅಳವಡಿಸಿ ವನ್ಯಪ್ರಾಣಿಗಳನ್ನು ಸೆರೆಹಿಡಿದು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ.<br><br>ಮುಂದುವರೆದು, ವನ್ಯಪ್ರಾಣಿಗಳಿಂದ ಉಂಟಾಗುವ ಹಾನಿ ಪ್ರಕರಣಗಳಲ್ಲಿ ನಿಯಮಾನುಸಾರ ಇಲಾಖಾ ವತಿಯಿಂದ ಪರಿಹಾರ ಪಾವತಿಸಲಾಗುತ್ತಿದೆ. |
| ಆ | ರೈತರು ಬೆಳೆದ ಬೆಳೆಗಳನ್ನು ಕರಡಿಗಳು ನಾಶ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ರೈತರಿಗೆ ಬೆಳೆ ನಷ್ಟ ತುಂಬಲು ಕೈಗೊಂಡ ಕ್ರಮವೇನು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಅಪಜೀ/156/ ಎಫ್.ಡಬ್ಲ್ಯೂ.ಎಲ್/ 2022 ದಿನಾಂಕ: 18.01.2023 ರನ್ವಯ ಬೆಳೆ ನಷ್ಟಉಂಟಾದ ರೈತರಿಗೆ ಇಲಾಖೆಯಿಂದ ಪರಿಹಾರ ಧನ ವಿತರಿಸಲಾಗುತ್ತಿದೆ. |
| ಇ | ಕನಕಗಿರಿ ತಾಲ್ಲೂಕಿನ ಗ್ರಾಮಗಳ ಸುತ್ತಮುತ್ತ ರೈತರು ಹೊಲಗಳಲ್ಲಿ ಜೀವನೋಪಾಯಕ್ಕಾಗಿ ವಾಸ್ತವ್ಯವಿದ್ದು, ಕಾಡುಪ್ರಾಣಿಗಳಿಗೆ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರೈತರ ರಕ್ಷಣೆಗೆ ಸರ್ಕಾರದ ಕೈಗೊಂಡ ಕ್ರಮವೇನು; | ಕನಕಗಿರಿ ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಾಡುಪ್ರಾಣಿಗಳು ಕಂಡುಬಂದಲ್ಲಿ ಜನರ ರಕ್ಷಣೆಗಾಗಿ ಸಿಬ್ಬಂದಿಯವರು ರಾತ್ರಿ ಗಸ್ತು ಮಾಡಿ ಪಟಾಕಿಗಳನ್ನು ಸಿಡಿಸಿ ಸದ್ದುಮಾಡಿ ವನ್ಯಪ್ರಾಣಿಗಳನ್ನು ಕಾಡಿಗೆ ಮರಳಿಸುವ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಪದೇ ಪದೇ ವನ್ಯಪ್ರಾಣಿಗಳ ಸಂಚಾರ ಕಂಡುಬಂದಲ್ಲಿ, ಇಲಾಖೆ ವತಿಯಿಂದ ಬೋನನ್ನು ಅಳವಡಿಸಿ ವನ್ಯಪ್ರಾಣಿಗಳನ್ನು ಸೆರೆಹಿಡಿದು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ. |
| ಈ | ಕನಕಗಿರಿ ತಾಲ್ಲೂಕಿನ ಸುತ್ತಲು ಗುಡ್ಡಗಾಡುಗಳಲ್ಲಿ ಕರಡಿ ಸಂಖ್ಯೆ ಹೆಚ್ಚಾಗಿದ್ದು, ಕರಡಿ ಧಾಮ ಮಾಡುವ ಚಿಂತನೆ ಇದೆಯೇ; ಇದ್ದಲ್ಲಿ ಯಾವ ವರ್ಷದಿಂದ ಚಾಲನೆ ಮಾಡಲಾಗುವುದು? (ವಿವರ ನೀಡುವುದು) | ಪ್ರಸ್ತುತ ಕನಕಗಿರಿ ತಾಲ್ಲೂಕಿನಲ್ಲಿ ಕರಡಿಧಾಮ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: ಅಪಜೀ 92 ಎಫ್‌ಡಬ್ಲ್ಯೂಎಲ್ 2024**

Behands

(**ಈಶ್ವರ ಬಿ.ಖಂಡ್ರೆ**)

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು